# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 67(ಹಳೆಯ ಸಂಖ್ಯೆ-19), ಸಂಜಯನಗರ. ಬೆಂಗಳೂರು.

ಸಂಖ್ಯೆ: ಸ.ಅ/ವಾ-67(ಹಳೆಯ ಸಂಖ್ಯೆ-19)/ಪಿ.ಆರ್/33/2022-23 ದಿನಾಂಕ:-22-11-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ:-ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-22-11-2022 ರಂದು ವಾರ್ಡ್ ನಂ: 67 (ಹಳೆಯ ಸಂಖ್ಯೆ-19) ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಷರಾ |
|---|---|---|---|
| 1. | ಶ್ರೀಮತಿ. ಜ್ಯೋತಿ.ಜಿ ಚೌಳೂಲ್ಕರ್<br>ಸ.ಕಾ.ನಿ (ಘ.ತ್ಯಾ.ನಿ) ಪುಲಿಕೇಶಿ ನಗರ ವಿಭಾಗ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | |
| 2. | ಶ್ರೀ. ನವನಾಥ್ | ಸದಸ್ಯ ಕಾರ್ಯದರ್ಶಿ ಮತ್ತು<br>ಸಹಾಯಕ ಅಭಿಯಂತರರು ವಾರ್ಡ್ ನಂ: 67(ಹಳೆಯ ಸಂಖ್ಯೆ-19) | |
| 3. | ಶ್ರೀ. ಸಲ್ಮಾನ್ | ಹಿರಿಯ ಆರೋಗ್ಯ ಪರಿವೀಕ್ಷಕರು | |
| 4. | ಟ್ರಾಫಿಕ್ ಪೋಲೀಸ್ ಅಧೀಕಾರಿಗಳು | ಆರ್.ಟಿ ನಗರ | |
| 5. | ಶ್ರೀ. ಮಂಜುನಾಥ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | |
| 6. | ಪೋಲೀಸ್ ಅಧೀಕಾರಿಗಳು | ಸಂಜಯನಗರ ಪೋಲೀಸ್ ಠಾಣೆ | |
| 7. | ಬೀದಿ ದೀಪ ನಿರ್ವಾಹಕರು | Street light Incharge, B B M P. | |
| 8. | ಶ್ರೀ. ಆರ್.ಎ.ಹುದ್ದಾರ್ ಮತ್ತು ಇತರರು | ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು | |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ನವನಾಥ್, ಸಹಾಯಕ ಅಭಿಯಂತರರು ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀಮತಿ ಜ್ಯೋತಿ.ಜಿ ಚೋಳೂಲ್ಕರ್ ರವರಿಗೆ ಮತ್ತು ಸಭೆಯಲ್ಲಿ ಸೇರಿದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಘನತ್ಯಾಜ್ಯ ನಿರ್ವಹಣೆ:-**

1. ವಾರ್ಡ್‌ನ ತ್ಯಾಜ್ಯವನ್ನು ಸೂಕ್ತವಾಗಿ ನಿರ್ವಹಿಸಬೇಕಾಗಿ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು

**ಬೀದಿ ದೀಪಗಳ ನಿರ್ವಹಣೆ:-**

1. ವಾರ್ಡ್‌ನ ಬೀದಿ ದೀಪಗಳು ಕಾರ್ಯನಿರ್ವಹಿಸದೇ ಇರುವ ಬಗ್ಗೆ ಸಾರ್ವಜನಿಕರು ದೂರು ನೀಡಿದ್ದಾಗ ಸಮಯಕ್ಕೆ ಸರಿಯಾಗಿ ಬೀದಿ ದೀಪ ನಿರ್ವಹಕರು ಸ್ಪಂದಿಸದೇ ಇರುವ ಬಗ್ಗೆ ಸಾರ್ವಜನಿಕರು ತಿಳಿಸಿದರು, ಸದರಿ ವಿಷಯದ ಬಗ್ಗೆ ಗಮನ ಹರಿಸಬೇಕಾಗಿ ಬೀದಿ ದೀಪಗಳ ನಿರ್ವಹಣೆಯ ವಿಭಾಗದವರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

**ಬೃಹತ್ ನೀರು ಕಾಲುವೆ:-**

1. ವಾರ್ಡ್‌ನಲ್ಲಿ ಹಾದು ಹೋಗುತ್ತಿರುವ ಬೃಹತ್ ನೀರು ಕಾಲುವೆಗಳಲ್ಲಿ ಕಸ ಕಡ್ಡಿ ತುಂಬಿರುತ್ತದೆ, ಹಲ್ಲು ಬೆಳೆದಿರುತ್ತದೆ ಮತ್ತು ಬೃಹತ್ ನೀರು ಕಾಲುವೆಗಳ ಗೋಡೆಗಳು (ಕೆಲವು ಕಡೆ) ಕುಸಿದಿರುತ್ತವೆ ಎಂದು ಸಾರ್ವಜನಿಕರು ತಿಳಿಸಿದರು. ಈ ಬಗ್ಗೆ ಗಮನ ಹರಿಸಿ ಬೃಹತ್ ನೀರು ಕಾಲುವೆಗಳನ್ನು ಡಿ ಸಿಲ್ಟ್ ಮಾಡಲು ಮತ್ತು ಕಾಲುವೆ ಗೋಡೆಗಳನ್ನು ಸರಿಪಡಿಸಬೇಕಾಗಿ ಬೃಹತ್ ಮಳೆ ನೀರು ಕಾಲುವೆ ನಿರ್ವಹಣೆ ಮಾಡುವ ಅಧಿಕಾರಿಗಳು ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

Scanned with

ಕಾಮಗಾರಿ ಇಲಾಖೆ:-.

1. ವಾರ್ಡ್‌ನ ವಿವಿಧ ರಸ್ತೆಗಳಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚಬೇಕಾಗಿ ಸಾರ್ವಜನಿಕರು ಕೋರಿದರು. ಮೇಲ್ಕಂಡ ವಿಷಯಗಳ ಬಗ್ಗೆ ಗಮನಹರಿಸಿ ಬಗೆಹರಿಸಬೇಕಾಗಿ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಅಭಿಯಂತರರಿಗೆ ತಿಳಿಸಿದರು.

ಉದ್ಯಾನವನ:-

1. ವಾರ್ಡ್‌ನ ಆರ್.ಎಮ್.ವಿ ಆಸ್ಪತ್ರೇಯ ಹತ್ತಿರವಿರುವ ಉದ್ಯಾನವನದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿ ಸಾರ್ವಜನಿಕರು ಕೋರಿದರು.
2. **ಪೋಸ್ಟಲ್ ಕಾಲೋನಿಯಲ್ಲಿ** ಬರುವ ಉದ್ಯಾನವನಕ್ಕೆ ನಿರ್ವಹಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾರ್ವಜನಿಕರು ಕೋರಿದರು

ಅರಣ್ಯ ಇಲಾಖೆ:-

1. ವಾರ್ಡ್‌ನ ಸೆಂಟ್ರಲ್ ಎಕ್ಸೈಜ್ ಲೇಔಟ್ 1ನೇ ಮುಖ್ಯರಸ್ತೆ ಮತ್ತು 1ನೇ ಅಡ್ಡರಸ್ತೆಯಲ್ಲಿ ಮರದ ಕೊಂಬೆಗಳು ಮುರಿದು ಬೀಳುವ ಸ್ಥಿತಿಯಲ್ಲಿದ್ದು, ಸದರಿ ಮರದ ಕೊಂಬೆಗಳನ್ನು ಕತ್ತರಿಸಿ ತೆರವುಗೊಳಿಸಬೇಕಾಗಿ ಸಾರ್ವಜನಿಕರು ಕೋರಿದರು.
2. ಸೆಂಟ್ರಲ್ ಎಕ್ಸೈಜ್ ಲೇಔಟ್‌ನ ದೊಡ್ಡ ಪಾರ್ಕ್‌ನಲ್ಲಿ ಮರದ ಕೊಂಬೆಗಳು ಜೋತಾಡುತ್ತಿದ್ದು, ಟ್ರೀ ಟ್ರಿಮ್ಮಿಂಗ್ ಮಾಡಬೇಕಾಗಿ ಸಾರ್ವಜನಿಕರು ಕೋರಿದರು.
3. ವಾರ್ಡ್‌ನ ಎಲ್ಲಾ ಲೇಔಟ್‌ಗಳಲ್ಲಿಯೂ ಸಹ ಮರದ ಕೊಂಬೆಗಳು ಜೋತಾಡುತ್ತಿದ್ದು, ಟ್ರೀ ಟ್ರಿಮ್ಮಿಂಗ್ ಮಾಡಬೇಕಾಗಿ ಸಾರ್ವಜನಿಕರು ಕೋರಿದರು.
   ಅರಣ್ಯಾಧಿಕಾರಿಗಳೂ ಯಾವುದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗದಿರುವ ಬಗ್ಗೆ ನೋಡಲ್ ಅಧಿಕಾರಿಗಳು ಬೇಸರ ವ್ಯಕ್ತ ಪಡಿಸುತ್ತಾ ವಾರ್ಡ್ ಸಮಿತಿ ಸಭೆಯ ನಡಾವಳಿಗಳನ್ನು ಅರಣ್ಯಾಧಿಕಾರಿಗಳಿಗೆ ಕಳುಹಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಡಬೇಕಾಗಿ ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಬಿಯಂತರರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

**ಬಿ.ಡಬ್ಲ್ಯೂ.ಎಸ್.ಎಸ್.ಬಿ:-**

1. ಪೊಸ್ಟಲ್ ಕಾಲೋನಿಯ 6ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆಯಲ್ಲಿ ಕುಡಿಯುವ ನೀರಿನ ಪೈಪ್ ಸೋರಿಕೆಯಾಗುತ್ತಿರುವ ಬಗ್ಗೆ ಸಾರ್ವಜನಿಕರು ಕೋರಿದರು.
2. ಎನ್.ಜಿ.ಇ.ಎಫ್ ಲೇಔಟ್‌ನ 6ನೇ ಮುಖ್ಯರಸ್ತೆಯಲ್ಲಿ ಪದೇ ಪದೇ ಒಳಚರಂಡಿ ಪೈಪ್‌ಲೈನ್ ಓವರ್ ಪ್ಲೋ ಆಗುತ್ತಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು.
3. ಸೆಂಟ್ರಲ್ ಎಕ್ಸೈಜ್‌ನ 4ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ಪೈಪ್‌ಲೈನ್‌ಗಳು ಕಟ್ಟಿಕೊಂಡಿರುವುದಾಗಿ ಹಾಗೂ ತುರ್ತಾಗಿ ಸದರಿ ಲೈನ್‌ಗಳನ್ನು ಡಿ-ಸಿಲ್ಟಿಂಗ್ ಮಾಡಬೇಕಾಗಿ ಸಾರ್ವಜನಿಕರು ಕೋರಿದರು.
4. ಸೆಂಟ್ರಲ್ ಎಕ್ಸೈಜ್ ಲೇಔಟ್ ಮತ್ತು ಆರ್.ಎಂ.ಎಸ್ ಕಾಲೋನಿಯಲ್ಲಿ ನೀರು ಸಮರ್ಪಕವಾಗಿ ಸರಬರಾಜು ಆಗುತ್ತಿಲ್ಲದಿರುವ ಬಗ್ಗೆ ಸಾರ್ವಜನಿಕರು ದೂರಿದರು.
   ಸದರಿ ಮೇಲ್ಕಂಡ ವಿಷಯಗಳ ಬಗ್ಗೆ ಗಮನಹರಿಸಿ ತುರ್ತಾಗಿ ಬಗೆಹರಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

**ಟ್ರಾಫಿಕ್ ಮತ್ತು ಕಾನೂನು ಸುವ್ಯವಸ್ಥೆ-**

1. ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 1ನೇ ಮುಖ್ಯರಸ್ತೆಯಲ್ಲಿ ರಾತ್ರಿ ವೇಳೆ ಪುಂಡ ಪೋಕರಿಗಳು ಬೈಕ್ ವೀಲಿಂಗ್ ಮಾಡುತ್ತಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಹಾಗೂ 1ನೇ ಮುಖ್ಯ ರಸ್ತೆಯ ಬಸ್ ನಿಲ್ದಾಣದಲ್ಲಿ ಪುಂಡ ಪೋಕರಿಗಳು ಕುಳಿತುಕೊಂಡು ತೊಂದರೆ ಕೊಡುತ್ತಿರುವುದಾಗಿ ಸಾರ್ವಜನಿಕರು ದೂರಿದರು.
2. ಭೂಪಸಂದ್ರ ರಸ್ತೆಯ ಗ್ಯಾಸ್ ಗೋಡೌನ್ ರಸ್ತೆಯ ಹತ್ತಿರ ಪುಂಡ ಪೋಕರಿಗಳು ರಾತ್ರಿ 8.00 ರಿಂದ 10.30 ರವರೆಗೆ ಮದ್ಯ ಸೇವನೆ ಮಾಡಿ ಗಲಾಟೆ ಮಾಡುತ್ತಿರುವುದಾಗಿ ಸಾರ್ವಜನಿಕರು ದೂರಿದ್ದು, ಸದರಿ ವಿಷಯಗಳ ಬಗ್ಗೆ ಗಮನಹರಿಸಿ ಬಗೆಹರಿಸಬೇಕಾಗಿ ಟ್ರಾಫಿಕ್ ಮತ್ತು ಪೊಲೀಸ್ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

Scanned with

**ಬೆಸ್ಕಾಂ:-**

1. ವಾರ್ಡ್‌ನಲ್ಲಿ ಬೆಸ್ಕಾಂ ನಿಂದ ಯು.ಜಿ ಕೇಬಲ್ ಅಳವಡಿಸುತ್ತಿರುವ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಸದರಿ ಕಾಮಗಾರಿಯಿಂದ ನಿರ್ಮಾಣವಾದ ರಸ್ತೆ ಗುಂಡಿಗಳನ್ನು ಡಾಂಬರೀಕರಣ ಮಾಡುವ ಕಾಮಗಾರಿ ಮುಕ್ತಾಯ ಹಂತದಿಲ್ಲಿದ್ದು, ಇನ್ನೂ ಕೆಲವು ಕಡೆ ಗುಂಡಿಗಳನ್ನು ಮುಚ್ಚದೇ ಇರುವ ಬಗ್ಗೆ ಸಾರ್ವಜನಿಕರು ದೂರಿದರು. ಸದರಿ ಗುಂಡಿಗಳನ್ನು ಹುಡುಕಿ ಮುಚ್ಚಲು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರು ರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ವಾರ್ಡ್‌ನ ಅಧ್ಯಕ್ಷರು ಮಾತನಾಡುತ್ತಾ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಡಲೇ ಬಗೆಹರಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಈ ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್-67(ಹಳೆಯ ಸಂಖ್ಯೆ-19),
ಸಂಜಯನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-67(ಹಳೆಯ ಸಂಖ್ಯೆ-19),
ಸಂಜಯನಗರ

<u>ಪ್ರತಿಯನ್ನು:-</u>

5. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
7. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಕಡತಕ್ಕೆ

Scanned with